# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 29-11-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮಲೇಶಿಯನ್ ಪಾಮೆಣ್ಣೆ ದರ 2 ವಾರಗಳ ಗರಿಷ್ಠ ಮಟ್ಟಕ್ಕೆ

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 3 ಶೇಕಡಾ ಹೆಚ್ಚಳದೊಂದಿಗೆ 4260 ರಿಂಗಿಟ್ಸ್, $ 945.62 ಆಗಿದೆ. ಚೈನಾದ ದಲಿಯನ್ ಹಾಗೂ ಅಮೇರಿಕಾದ ಚಿಕಾಗೋ ಮಾರುಕಟ್ಟೆಗಳಲ್ಲಿನ ದರ ಹೆಚ್ಚಳವನ್ನುಸರಿಸಿ ಮಲೇಶ್ಯಾದಲ್ಲೂ ದರ ಹೆಚ್ಚಳವಾಗಿದೆಯೆನ್ನಲಾಗಿದೆ.

## ಸರಕಾರಿ ಏಜೆನ್ಸಿಗಳಿಂದ ಉದ್ದು ಖರೀದಿ ಯತ್ನ

ತನ್ನ ಕಾಪು ದಾಸ್ತಾನು ಸದೃಡ ಗೊಳಿಸಲು ಸರಕಾರ ತನ್ನ ಖರೀದಿ ಏಜೆನ್ಸಿಗಳ ಮೂಲಕ 25 ಸಾವಿರ ಟನ್ ಉದ್ದು ಖರೀದಿಗೆ ಪ್ರಯತ್ನಿಸಲಿದೆಯೆನ್ನಲಾಗಿದೆ. ಈಗ ಮಾರುಕಟ್ಟೆ ದರ ಕನಿಷ್ಠ ಬೆಂಬಲ ಬೆಲೆಗಿಂತ ಅಧಿಕವಾಗಿರುವುದರಿಂದ ರೈತರು ಕನಿಷ್ಠ ಬೆಂಬಲ ಬೆಲೆಗೆ ಮಾರಾಟಮಾಡಲಾರೆನ್ನಲಾಗಿದ್ದು, ಮಾರುಕಟ್ಟೆ ದರದಲ್ಲೇ ಖರೀದಿಸಬೇಕಾಗಬಹುದೆನ್ನಲಾಗಿದೆ. ಸದ್ಯ ಸರಕಾರದ ಕಾಪು ದಾಸ್ತಾನಿನಲ್ಲಿ 50 ಸಾವಿರ ಟನ್ ಉದ್ದು (32000 ಟನ್ ಆಮದು ಸೇರಿ) ಇದೆಯೆನ್ನಲಾಗಿದೆ. ಕಾಪು ದಾಸ್ತಾನು ಅವಶ್ಯಕತೆ 4 ಲಕ್ಷ ಟನ್‌ಗಳೆನ್ನಲಾಗಿದೆ. ಸರಕಾರದ ಪ್ರಾಥಮಿಕ ಅಂದಾಜಿನ ಪ್ರಕಾರ ಖಾರೀಫ್ ಬೆಳೆಯ ಉತ್ಪಾದನೆ 1.8 ಮಿಲಿಯನ್ ಟನ್‌ಗಳೆನ್ನಲಾಗಿದೆ. ಉತ್ಪಾದನೆ ಬೇಡಿಕೆಗಿಂತ ಕಡಿಮೆಯಾಗಿರುವುದರಿಂದ ದರ ಹೆಚ್ಚಳದಲ್ಲೇ ಮುಂದುವರಿಯುವ ಸಾಧ್ಯತೆಯಿದೆ.